ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 3, July-August 2025, Pp. 53-62
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಪಶುಪಾಲನೆ ಸಂಸ್ಕೃತಿಯಲ್ಲಿ ಮಾತೃ ದೇವತಾರಾಧನೆ: ಒಂದು ಅಧ್ಯಯನ

**ಡಾ. ವೀಣಾ ಕೆ.ಆರ್**
ಉಪನ್ಯಾಸಕರು, ಸಮಾಜಶಾಸ್ತ್ರ ವಿಭಾಗ, ಕೊಪ್ಪಳ ವಿಶ್ವವಿದ್ಯಾಲಯ, ಕೊಪ್ಪಳ.

***Abstract:***
*ಬುಡಕಟ್ಟು ಸಮುದಾಯಗಳಲ್ಲಿ ಪ್ರಧಾನವಾಗಿ ಮಾತೃ ಆರಾಧನಾ ಪದ್ಧತಿಯನ್ನು ಕಾಣಬಹುದಾಗಿದೆ. ಬುಡಕಟ್ಟುಗಳಲ್ಲಿ ಪುರುಷ ಪ್ರಬಲವಾಗಿದ್ದರೂ ಮನೆಯ ಜವಾಬ್ದಾರಿಗಳನ್ನು ಸ್ತ್ರೀ ಹೊರುತ್ತಾಳೆ. ಪುರುಷ ಬೇಟೆ ಪಶುಪಾಲನೆಯಲ್ಲಿ ಗುರುತಿಸಿಕೊಂಡರೆ ಸ್ತ್ರೀ ಪಶುಪಾಲನ ಸಂಸ್ಕೃತಿಗೆ ಹೊಂದಿಕೊಂಡು ತನ್ನ ಬಿಡುವಿನ ಸಮಯದಲ್ಲಿ ರೊಪ್ಪಗಳ ಹತ್ತಿರವೇ ಕಾಡಿನ ನೆಲವನ್ನು ಸ್ವಲ್ಪ ಭಾಗವನ್ನು ಹದ ಮಾಡಿಕೊಂಡು ತನಗೆ ಬೇಕಾದ ದಿನ ನಿತ್ಯದ ಗೆಡ್ಡೆ ಗೆಣಸುಗಳನ್ನು ಬೆಳೆಯುವ ಸಂಸ್ಕೃತಿಯನ್ನು ಅಳವಡಿಸಿಕೊಂಡಳು. ಪ್ರಾಚೀನ ಕಾಲದಲ್ಲಿ ಮಹಿಳೆ ತನ್ನ ಗಂಡನ ಹಿಂದೆಯೇ ಕುಟುಂಬ ಸಮೇತರಾಗಿ ಪಶುಪಾಲನೆಯಲ್ಲಿ ತೊಡಗಿರುವುದು ಕಂಡುಬರುತ್ತದೆ. ಪುರುಷ ಪಶುಗಳನ್ನು ಕಾಡಿಗೆ ಹೊಡೆದುಕೊಂಡು ಹೋದರೆ ಮಹಿಳೆ ರೊಪ್ಪದಲ್ಲಿನ ಕೆಲಸಗಳನ್ನು ಮಾಡುತ್ತಾ ದನಕರುಗಳನ್ನು ನೋಡಿಕೊಂಡು ಮನೆಯ ಜವಾಬ್ದಾರಿಯನ್ನು ನಿಭಾಯಿಸುತ್ತಿದ್ದಳು. ಹೀಗೆ ಪಶುಪಾಲನೆ ಮಾಡುವಂತಹ ಪುರುಷರು ತಮ್ಮ ಪಶುಗಳ ಸಂರಕ್ಷಣೆಗಾಗಿ ಪ್ರಕೃತಿ ಹಾಗೂ ಕಾಡು ಪ್ರಾಣಿಗಳ ಜೊತೆ ಸಂಘರ್ಷಕ್ಕಿಳಿದು ಹೋರಾಡುತ್ತಾ ಮಡಿದ ಅವರು ಸಾಂಸ್ಕೃತಿಕ ವೀರರು ಎಂದು ಆರಾಧಾನೆಗೊಳ್ಳುತ್ತಾರೆ. ಇನ್ನು ಮಹಿಳೆಯರು ಪುರುಷನ ಜೊತೆಯಲ್ಲಿಯೇ ಪಶುಪಾಲನೆಯನ್ನು ಮಾಡುತ್ತಾ ಇವರು ಸಹ ಸಾಂಸ್ಕೃತಿಕ ವೀರರಂತೆ ಸಮುದಾಯದ ಸಾಂಸ್ಕೃತಿಕ ನಾಯಕಿಯರಾಗಿ ಆರಾಧಾನೆಗೊಳ್ಳುವುದು ಮಾತೃ ಆರಾಧಾನೆಯ ಸ್ವರೂಪವಾಗಿದೆ.*

***Keywords:*** *ಬುಡಕಟ್ಟು, ಮ್ಯಾಸ ಬೇಡ, ಸಾಂಸ್ಕೃತಿಕ ನಾಯಕ, ಮಾತೃ ದೇವಾತಾರಾಧನೆ.*

**ಪೀಠಿಕೆ**

ಪಶುಗಳಿಗೆ ರೋಗ ರುಜಿನಿಗಳು ಬಂದಂತಹ ಸಂದರ್ಭದಲ್ಲಿ ಪಶುಗಳನ್ನು ರಕ್ಷಣೆ ಮಾಡಿದ ಮಹಿಳೆಯರನ್ನು ಹಾಗೂ ಪಶುಗಳು ಸಂಕಷ್ಟದಲ್ಲಿ ಹೋರಾಡಿ ಪಶುಗಳನ್ನು ರಕ್ಷಣೆ ಮಾಡಿ ತನ್ನ ಸಮುದಾಯಕ್ಕೆ ಹಿಂತಿರುಗಿಸಿ ಕೊಟ್ಟಿರುವ ಮಹಿಳೆಯರನ್ನು ಮಾತೃ ಆರಾಧನೆ ನೆಲೆಯಲ್ಲಿ ಬಿಂಬಿಸಿರುವುದನ್ನು ಕಾಣಬಹುದಾಗಿದೆ.

ಪಶುಪಾಲಕರಲ್ಲಿ ಪುರುಷನಿಗೆ ಸರಿಸಮಾನವಾಗಿ ನಿಂತು ದುಡಿದು ಹೈನುಗಾರಿಕೆಯನ್ನು ಮಾಡಿ ಸಮುದಾಯವನ್ನು ಪೋಷಿಸಿದ ಮಹಿಳೆಯರನ್ನು ಸಾಂಸ್ಕೃತಿಕ ನಾಯಕಿಯರ ಸ್ಥಾನದಲ್ಲಿ ಇಡಬೇಕಾದದ್ದು ಯೋಗ್ಯವಾದುದಾಗಿದೆ. ಹಾಗೆಯೇ ಸರ್ವಾಧಿಕಾರಿ ಧೋರಣೆಯ ಆಳುವ ಪರಕೀಯ ಶಕ್ತಿಗಳು ತಮ್ಮ ಸಮುದಾಯಗಳ ಮೇಲೆ ಆಕ್ರಮಣ ಮಾಡಿದಾಗ ದಿಟ್ಟತನದಿಂದ ಹೋರಾಡಿ

***Please cite this article as:*** ವೀಣಾ ಕೆ.ಆರ್. (2025). ಪಶುಪಾಲನೆ ಸಂಸ್ಕೃತಿಯಲ್ಲಿ ಮಾತೃ ದೇವತಾರಾಧನೆ: ಒಂದು ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 4(3), 53–62

ಸಮುದಾಯವನ್ನು ರಕ್ಷಿಸಿದ ಮಹಿಳೆಯರನ್ನು ಇಲ್ಲಿ ಕಾಣಬಹುದಾಗಿದೆ. ಹೀಗೆ ದಿಟ್ಟತನದಿಂದ ಕಾರ್ಯತಂತ್ರವನ್ನು ರೂಪಿಸಿ ಹೋರಾಟ ಮಾಡುವುದರ ಮೂಲಕ ಆಕ್ರಮಣಕಾರಿ ಪುರುಷ ಶಕ್ತಿಯನ್ನು ದಮನ ಮಾಡುವ ಮೂಲಕ ಸಮುದಾಯವನ್ನು ಮುನ್ನಡೆಸಿದ ಶಕ್ತಿಗಳನ್ನು ಮಾತೃ ಆರಾಧನೆ ಎಂದು ಗುರುತಿಸಿ ಗೌರವಿಸುವ ಅವಶ್ಯಕತೆ ಇದೆ.

**ದಾನಸಾಲಿಯಮ್ಮ**

ಮಂದನಮುತ್ತಿ ಮಹಾದೇವನೆಂಬ ಮತ್ತು ಶಾಂತಲದೇವಿಯ ದಂಪತಿಗೆ ಜನಿಸಿದ ಮಗು ದಾನಸಾಲಮ್ಮ. ಇವಳನ್ನು ಶುಕ್ಲಮಲ್ಲಿನಾಯಕನಿಗೆ ಕೊಟ್ಟು ವಿವಾಹ ಮಾಡುತ್ತಾರೆ. ಶುಕ್ಲಮಲ್ಲನಾಯಕನು ಈಶ್ವರನಿಂದ ಸುರಭಿ ಹಸುಗಳನ್ನು ಪಡೆದುಕೊಂಡು ಜೀವಿಸುತ್ತಿದ್ದ ಕಾಲದಲ್ಲಿ ದಾನಸಾಲಮ್ಮ ಸೂರ್ಯನ ವರದಿಂದ ಅಕ್ಕರಾಯಮ್ಮ ದೇವಿಯನ್ನು ಪಡೆದರು. ಈ ದಂಪತಿಗೆ ಒಟ್ಟು ಏಳು ಮಕ್ಕಳು. ಈ ದಂಪತಿ ತಮ್ಮ ಮಕ್ಕಳೊಂದಿಗೆ ಪಶುಪಾಲನೆ ಮಾಡಿಕೊಂಡು ಜೀವನ ಸಾಗಿಸುತ್ತಾರೆ. ಈ ತಾಯಿಯ ಮೂಲದಿಂದ ಬಂದ ಪಶುಸಂಪತ್ತೇ ಮುಂದೆ ಮ್ಯಾಸಬೇಡರ ಬಹುಮುಖ್ಯ ಮೂಲ ಸಂಪತ್ತಾಯಿತು. ಹೀಗಾಗಿ ದಾನಸಾಲಮ್ಮನನ್ನು ಸಮುದಾಯದ ಜನರು ಮಾತೃ ಆರಾಧನಾ ಸ್ಥಾನದಲ್ಲಿಟ್ಟು ಪೂಜಿಸುತ್ತಾರೆ.

**ಅಕ್ಕರಾಯಮ್ಮ**

ಮ್ಯಾಸಬೇಡ ಸಮುದಾಯದಲ್ಲಿ ಎಲ್ಲರೂ ಒಪ್ಪಿಕೊಂಡು ಗೌರವಿಸಲ್ಪಡುವ ಮಹಿಳೆಯೆಂದರೆ ಅಕ್ಕರಾಯಮ್ಮ. ಈಕೆಯನ್ನು ವ್ಯಕ್ತಿ ನೆಲೆಯಿಂದ ಶಕ್ತಿಯ ಸ್ಥಾನಕ್ಕೇರಿಸಿ ಸಮುದಾಯ ಸ್ಮರಿಸುತ್ತಾ, ಆರಾಧಿಸುತ್ತಾ ಬಂದಿದೆ. ಇವಳನ್ನು ಸಮುದಾಯದವರು ದೊಡ್ಡಕ್ಕ ಅಥವಾ ಪೆದ್ದಕ್ಕ ಎಂದು ಕರೆಯುವರು. ಇವಳು ದಾನಸಾಲಿಯಮ್ಮ ಮತ್ತು ಶುಕ್ಲಮಲ್ಲಿನಾಯಕನ ಹಿರಿಯ ಮಗಳಾಗಿ ಜನಿಸಿ, ಬಾಲ್ಯದಲ್ಲಿಯೇ ತನ್ನ ತಂದೆ ತಾಯಿಯಿಂದ ದೂರವಾಗಿ ತನ್ನ ಏಳು ತಮ್ಮಂದಿರನ್ನು ಸಾಕಿ ಸಲಹಿದಳು. ನಂತರ ತಮ್ಮಂದಿರು ವಯಸ್ಸಿಗೆ ಬಂದಾಗ ಅವರಿಗೆ ಆದ ಸಾಮಾಜಿಕ ಅಪಮಾನದಿಂದ ಬೇಸತ್ತು ತನ್ನ ಅಕ್ಕನಿಂದ ತಮ್ಮ ತಂದೆಯ ಬಗ್ಗೆ ತಿಳಿದುಕೊಳ್ಳುತ್ತಾರೆ. ನಂತರ ಇವರು ತಂದೆಯ ವಿರುದ್ಧ ಹೋರಾಟ ಮಾಡಿ ಆದರೂ ಆತನನ್ನು ತಮ್ಮ ತಂದೆ ಎಂದು ಒಪ್ಪಿಸಿಕೊಂಡು ಆತನಲ್ಲಿರುವ ಆಸ್ತಿಯ ಮೇಲೆ ತಮ್ಮ ಹಕ್ಕುಗಾರಿಕೆ ಸ್ಥಾಪಿಸಬೇಕೆಂಬ ಛಲ ಹೊಂದಿದ್ದರು, ಆಗ ಅಕ್ಕರಾಯಮ್ಮ ತನ್ನ ತಂದೆ ಸೂರ್ಯನೆಂದು ತಮ್ಮಂದಿರಿಗೆ ಹೇಳುತ್ತಾಳೆ. ಆತನ ಜೊತೆ ಹೋರಾಡುವುದು ಅನಿವಾರ್ಯ ಮತ್ತು ಅವಶ್ಯಕವಾದದ್ದು ಎಂದು ರಾಯಮ್ಮ ನಿರ್ಧರಿಸಿದ್ದಳು. ಆಕೆ ತನ್ನ ತಮ್ಮಂದಿರಿಗೆ ಆತನ ವಿರುದ್ಧ ಹೋರಾಡಲು ತಂತ್ರಗಳ ಮೂಲಕ ತರಬೇತಿಯನ್ನು ನೀಡಿದಳು. ತನ್ನ ಅಕ್ಕನ ತರಬೇತಿಯಂತೆ ಸೂರ್ಯನ ವಿರುದ್ಧ ಹೋರಾಡಿ ತಮ್ಮ ಹಕ್ಕುಗಳನ್ನು ಪಡೆದುಕೊಂಡು ಬರುತ್ತಾರೆ. ಇವರ ತಂದೆಯಾದ ಸೂರ್ಯನಿಂದ ಮುತ್ತಿನ ಕಾಲ್ಪಂಡೆ, ಪಶು ಸಂಪತ್ತು, ಇನ್ನೂ ಮುಂತಾದ ಸಂಪತ್ತನ್ನು ಪಡೆದು ಭೂಲೋಕಕ್ಕೆ ಬರುತ್ತಾರೆ. ನಂತರ ಅವುಗಳನ್ನು ಪೂಜಿಸಿ ಹಂಚಿಕೊಳ್ಳುವ ಚಿಂತನೆ ನಡೆಸುತ್ತಾರೆ. ಆಗ ತಮ್ಮಂದಿರು ಸಂಪತ್ತನ್ನು ಹಂಚಿಕೊಡುವ ಹೊಣೆಗಾರಿಕೆಯನ್ನು ಅಕ್ಕನಿಗೆ ವಹಿಸುತ್ತಾರೆ. ಇಲ್ಲಿ ಅಕ್ಕರಾಯಮ್ಮನನ್ನು ಮಾತೃ ಪ್ರಧಾನ ಸಂಸ್ಕೃತಿಯ ನೆಲೆಯಲ್ಲಿ ನೋಡಬಹುದಾಗಿದೆ. ಏಕೆಂದರೆ ದಿಕ್ಕು ದೆಸೆ ಇಲ್ಲದಂತವರಾಗಿದ್ದ ತಮ್ಮಂದಿರಿಗೆ ರಾಯಮ್ಮ ಕುಟುಂಬದ ಯಜಮಾನಿಯಾಗಿ ನಿಂತು ಅಸ್ತಿತ್ವವನ್ನು ತನ್ನ ಜಾಣ್ಮೆಯಿಂದ ದೊರೆಕಿಸಿ ಕೊಡುತ್ತಾಳೆ.

ಅಕ್ಕರಾಯಮ್ಮನು ಸರ್ವಾಧಿಕಾರಿಗಳ ವಿರುದ್ಧ ಹೋರಾಡಿ ಜಯಗಳಿಸಿದ ಹಿನ್ನಲೆಯನ್ನು ನೋಡುವುದಾದರೆ. ಈಕೆಯ ತಮ್ಮಂದಿರಲ್ಲಿ ಒಬ್ಬರ ಮಗ ಕಾಟನಾಯಕ ಮಲ್ಲಯ್ಯ. ಬರಗಾಲದ ಸಂದರ್ಭದಲ್ಲಿ ದನಕರುಗಳಿಗೆ ಮೇವು ನೀರನ್ನು

ಹರಸುತ್ತಾ ಈತ ತನ್ನ ಪಶು ಗಂಪಳದೊಂದಿಗೆ ಶ್ರೀ ಶೈಲ ಪ್ರಾಂತ್ಯದಿಂದ ಹೊರಟು ಸಂಡೂರು ಕಿಂಡಿಯ ಮೂಲಕ ಮಧ್ಯ ಕರ್ನಾಟಕದ ಕಡೆ ಬರುತ್ತಾನೆ. ಅಗಾಧವಾದ ಈ ಪಶು ಸಂಪತ್ತನ್ನು ಕಂಡ ಸಂಡೂರಿನ ದೊರೆ ದುರಾಸೆಯಿಂದ ಇವರನ್ನು ತಡೆಯುತ್ತಾನೆ. ಆಗ ಕಂಪಳದವರು ಕಳವಳಗೊಂಡರು. ಕಾಟನಾಯಕ ಮಲ್ಲಯ್ಯನಿಗೂ ಆತಂಕ ಪ್ರಾರಂಭವಾಯಿತು. ಈತನ ಸೋದರತ್ತೆಯಾಗಿದ್ದ ರಾಯಮ್ಮ ಮೂಲ ನೆಲೆಯಲ್ಲಿಯೇ ಉಳಿದಿದ್ದಳು. ಈಕೆಗೆ ಕನಸಾಗಿ ತನ್ನವರು ಮತ್ತು ಪಶುಗಳು ಕಷ್ಟದಲ್ಲಿರುವ ಸಂಗತಿ ತಿಳಿಯುತ್ತದೆ. ಅಲ್ಲಿಂದ ಕೂಡಲೆ ಹೊರಟು ಬರುತ್ತಾಳೆ. ತನ್ನ ಕಂಪಳ ನೆಲೆಸಿರುವ ನೆಲೆಗೆ ಬಂದು ಮಾಯಾಂಬಿಕೆಯಂತೆ ಅರಸನ ಮಗಳಿಗೆ ದಡಾರ ರೋಗ ಬರುವಂತೆ ಮಾಡಿ ಅರಸನನ್ನು ಚಿಂತೆಗೀಡು ಮಾಡುತ್ತಾಳೆ. ತಾನು ಊರ ಮುಂದೆ ಕೊರವಂಜಿಯಂತೆ ಕುಳಿತು ಶಾಸ್ತ್ರ ಹೇಳುತ್ತಿರುತ್ತಾಳೆ. ರಾಜನಿಗೆ ಕೊರವಂಜಿಯ ಬಗ್ಗೆ ಸುದ್ದಿ ಮುಟ್ಟಿಸುತ್ತಾರೆ. ಆಕೆಯನ್ನು ಅರಮನೆಗೆ ಕರೆಸಿಕೊಂಡು ಮಗಳ ಭವಿಷ್ಯ ಕೇಳುತ್ತಾನೆ. ಆಗ ಕೊರವಂಜಿ ಹೀಗೆ ಹೇಳುತ್ತಾಳೆ 'ನಿನಗೆ ಒಬ್ಬಳೆ ಮಗಳು ಇದ್ದಾಳೆ. ನೀನು ಶರಣರ ಪಶು ಸಂಪತ್ತನ್ನು ಸೆರೆ ಹಿಡಿದಿರುವೆ, ಅವುಗಳನ್ನು ಬಿಡುಗಡೆ ಮಾಡಿ ಅವರಿಗೆ ಒಪ್ಪಿಸು ಆಗ ನಿನ್ನ ಮಗಳಿಗೆ ಗುಣವಾಗುತ್ತದೆ' ಎಂದು ಹೇಳಿದಳು. ಇದನ್ನು ಕೇಳಿದ ರಾಜ ತನ್ನ ಮಗಳಿಗೆ ನಾಳೆ ಬೆಳಗಾಗುವುದರೊಳಗೆ ಗುಣವಾದರೆ ಮಾತ್ರ ಬಿಡುಗಡೆ ಮಾಡುತ್ತೇನೆ ಎನ್ನುತ್ತಾನೆ. ಆಗ ಕೊರವಂಜಿ ರಾಯಮ್ಮ ಊರ ಮುಂದೆ ಬೇವಿನ ಸೊಪ್ಪಿನ ಗುಡಿಸಲನ್ನು ಹಾಕಿಸಿ, ಮಣ್ಣಿನ ಮಾರಮ್ಮನನ್ನು ಮಾಡಿ ಅದನ್ನು ಪೂಜಿಸಿ, ಮಗಳಿಗೆ ಬೇವಿನ ಸೀರೆಯನ್ನುಡಿಸಿ ದೀಪವನ್ನು ಉರಿಸು ಎಂದು ಹೇಳಿದಳು. ರಾಜನು ರಾಯಮ್ಮ ಹೇಳಿದಂತೆ ಮಾಡುತ್ತಾನೆ. ಆಗ ದೊರೆ ಮಗಳಿಗೆ ಗುಣವಾಗುತ್ತದೆ. ಆಗ ದೊರೆ ಇವರ ಪಶು ಸಂಪತ್ತನ್ನು ಕಂಪಳವನ್ನು ಬಿಡುಗಡೆ ಮಾಡುತ್ತಾನೆ. ನಂತರ ರಾಯಮ್ಮ ಇವರ ಜೊತೆಯಲ್ಲಿಯೇ ಹೊರಟು ಅಲ್ಲಲ್ಲಿ ತಂಗುತ್ತಾ ಮೇವು, ನೀರನ್ನು ಅರಸುತ್ತಾ ತಮಗೆ ತೊಂದರೆಯಾಗದ ಸ್ಥಳವನ್ನು ಹುಡುಕುತ್ತಾ ಇಂದಿನ ಚಿತ್ರದುರ್ಗ ಜಿಲ್ಲೆಯ ನಾಯಕನಹಟ್ಟಿ ಪ್ರಾಂತ್ಯಕ್ಕೆ ಬಂದು ನೆಲೆಸುತ್ತಾರೆ.

ನಂತರ ವೇದಾವತಿ ನದಿಯ ಉಪ ನದಿಯಾದ ಗರಣಿಯ ಪ್ರದೇಶದಲ್ಲಿ ರೊಪ್ಪಗಳನ್ನು ಕಟ್ಟಿಕೊಂಡು ಕಂಪಳವೆಲ್ಲ ನೆಲೆಸುತ್ತಾರೆ. ಅಪಾರವಾಗಿದ್ದ ಇವರ ಪಶು ಸಂಪತ್ತು ಎಲ್ಲರ ಗಮನ ಸೆಳೆಯುತ್ತದೆ. ಅಂದು ನಿಡುಗಲ್ಲನ್ನು ಆಳುತ್ತಿದ್ದ ಹೊಟ್ಟಣ್ಣ ನಾಯಕನೆಂಬುವನು ಇವರ ಪಶು ಸಂಪತ್ತನ್ನು ವಶಪಡಿಸಿಕೊಳ್ಳಬೇಕೆಂದು ಇವರ ಮೇಲೆ ಆಕ್ರಮಣ ಮಾಡುತ್ತಾನೆ. ದನಕರುಗಳು ಮೇಯಲು ಗೂಡಿನಿಂದ ಹೊರಗಡೆ ಹೋಗದಂತೆ ಪಾಪಮುತ್ತಿ ರೇವು ಎಂದು ಕರೆಯಲಾಗುವ ಒಂದು ಮಡುವಿನ ಬಳಿ ತಡೆದು ನಿಲ್ಲಿಸುತ್ತಾನೆ. ಮ್ಯಾಸ ಕಂಪಳವೆಲ್ಲಾ ಒಂದಾಗಿ ಪ್ರಯತ್ನಿಸಿದರೂ ಅವನನ್ನು ಹಿಮ್ಮೆಟ್ಟಿಸಲು ಸಾಧ್ಯವಾಗಲಿಲ್ಲ. ಆಗ ದನಕರುಗಳಿಗೆ ಮೇವಿಲ್ಲದೆ ತತ್ತರಿಸುತ್ತವೆ. ಈ ಸಂದರ್ಭಕ್ಕಾಗಲೇ ವೃದ್ಧಾಪ್ಯದಲ್ಲಿದ್ದ ರಾಯಮ್ಮನ ಮೊರೆ ಹೋಗುತ್ತಾರೆ. ರಾಯಮ್ಮನ ಸೂಚನೆಯ ಮೇರೆಗೆ ಆಕೆಯು ರೂಪಿಸಿಕೊಟ್ಟ ತಂತ್ರದಂತೆ ಇವರು ಪ್ರತಿ ದಾಳಿ ಮಾಡುತ್ತಾರೆ. ರಾಯಮ್ಮನು ಸಹ ಹೋರಾಟದಲ್ಲಿ ಪಾಲ್ಗೊಳ್ಳುತ್ತಾಳೆ. ಆಗ ಹೊಟ್ಟಣ್ಣನಾಯಕ ರಾಯಮ್ಮನ ತಂತ್ರಕ್ಕೆ ಭಯಪಟ್ಟು ಹಿಂತಿರುಗುತ್ತಾನೆ. ಆಗ ಅವರೆಲ್ಲರೂ ಸೇರಿ ರಾಯಮ್ಮನೇ ನಮಗೆಲ್ಲರಿಗೂ ನಾಯಕಿ ಎಂದು ಆದಿ ಶಕ್ತಿಯಂತೆ ಆಕೆಯ ಹೆಸರಿನಲ್ಲಿ ಎಲ್ಲಾ ಪೆಟ್ಟಿಗೆಗಳಿಗಿಂತ ದೊಡ್ಡದು ಪೆಟ್ಟಿಗೆ ಮಾಡಿಸಿ ಅದರಲ್ಲಿ ಆಕೆಯ ಸ್ವತ್ತುಗಳನ್ನು ಇರಿಸಿ, ಇವಳನ್ನು ಎಪ್ಪತ್ತೇಳು ಹಟ್ಟಿಗಳಿಗೆ ತಾಯಿ, ಒಡತಿ ಎಂದು ಗೌರವಿಸುತ್ತಾರೆ. ತಮ್ಮನ್ನು ಕಾಪಾಡಿದ ದೇವತೆಯೆಂದು ಈಕೆಯನ್ನು ದಡ್ಲು ಮಾರಮ್ಮ ಎಂದು ಕರೆದು ಮಾತ್ರ

ಸಂಸ್ಕೃತಿಯ ನೆಲೆಯಲ್ಲಿ ರೊಪ್ಪಗಳಲ್ಲಿ ಇಂದಿಗೂ ಆರಾಧನೆ ಮಾಡುವುದನ್ನು ಕಾಣಬಹುದು.

**ಮಲಿಯಮ್ಮ**

ಪಶುಪಾಲಕರಾದ ಮ್ಯಾಸಬೇಡರ ಸಂಸ್ಕೃತಿಯಲ್ಲಿ ಮಾತೃ ದೇವತೆಗಳನ್ನು ಆರಾಧಿಸುವ ಪದ್ಧತಿ ಇದೆ. ಅಂತಹ ಮಾತೃ ದೇವತೆಗಳಲ್ಲಿ ಮಲಿಯಮ್ಮನು ಒಬ್ಬಳು. ಮ್ಯಾಸಬೇಡರ ಪಶುಪಾಲನೆಯಲ್ಲಿ ಈಕೆಯ ಪಾತ್ರವು ಬಹುಮುಖ್ಯವಾದದ್ದು. ಈ ಸಮುದಾಯ ಶ್ರೀ ಶೈಲದಿಂದ ಮಧ್ಯಕರ್ನಾಟಕಕ್ಕೆ ಹನ್ನೆರಡು ಗುಡಿಸಲು ಮ್ಯಾಸಗಂಪಳದೊಂದಿಗೆ ಬಂದಂತಹ ಸಂದರ್ಭದಲ್ಲಿ ಇವರ ಜೊತೆ ಮಲಿಯಮ್ಮನು ಇದ್ದಳು ಎಂದು ಹೇಳುತ್ತಾರೆ. ಈ ಸಮಯದಲ್ಲಿ ಗೆದ್ದವಲ್ಲಿ ಎಂಬ ಊರಿನ ರಾಜನು ಮಲಿಯಮ್ಮ ಇದ್ದ ಮ್ಯಾಸಗಂಪಳ ಮೇಲೆ ದಾಳಿಯನ್ನು ಮಾಡುತ್ತಾನೆ. ಈ ಯುದ್ಧದ ಸಂದರ್ಭದಲ್ಲಿ ಮಲಿಯಮ್ಮ ತನ್ನ ಬುದ್ಧಿವಂತಿಕೆಯಿಂದ ಹೋರಾಡಿ ತನ್ನ ಮ್ಯಾಸಗಂಪಳವನ್ನು ಮತ್ತು ಪಶುಗಳನ್ನು ರಕ್ಷಿಸಿದಳು.

**ಮಲಿಯಮ್ಮ ಮ್ಯಾಸಕಂಪಳವನ್ನು ಮತ್ತು ಪಶುಸಂಪತ್ತನ್ನು ರಕ್ಷಿಸಿದ ಬಗೆ.**

ಮಲಿಯಮ್ಮ ತನ್ನ ಬುದ್ಧಿವಂತಿಕೆಯಿಂದ ಸೂರ್ಯ ಪರಮಾತ್ಮನನ್ನು, ಮಾರಮ್ಮನನ್ನು ಧ್ಯಾನಿಸುತ್ತಾ ಎತ್ತುಗಳ ಸುತ್ತ ಮೂರು ಬಾರಿ ಸುತ್ತುತ್ತಾ ಕೇಕೆ ಹಾಕುತ್ತಾಳೆ. ತನ್ನಂತೆಯೇ ಕಿಲಾರಿಗಳಿಗೂ ಕೇಕೆ ಹಾಕಲೂ ಹೇಳುತ್ತಾಳೆ. ಇದರಿಂದಾಗಿ ಎತ್ತುಗಳು ಗಾಬರಿಗೊಂಡು ದಿಕ್ಕಾಪಾಲಾಗಿ ಓಡಲು ಪ್ರಾರಂಭಿಸುತ್ತವೆ. ಮಲಿಯಮ್ಮನ ಈ ಉಪಾಯದ ತಂತ್ರ ಫಲಿಸುತ್ತದೆ. ಎತ್ತುಗಳ ಓಟದಿಂದಾಗಿ ಆ ಪ್ರದೇಶದಲ್ಲಿ ಭಾರಿ ದೂಳು ಏಳುತ್ತದೆ, ಆಗ ಗೆದ್ದವಲ್ಲಿ ರಾಜನು ತಬ್ಬಿಬ್ಬಾಗಿ ದಾರಿ ಕಾಣದೆ ಇಡೀ ಸೈನ್ಯವೇ ಒಬ್ಬರಿಗೊಬ್ಬರು ತಿವಿದುಕೊಳ್ಳುತ್ತಾರೆ. ಅಲ್ಲಿರುವ ಎತ್ತುಗಳು ಹಸುಗಳು ಗಾಬರಿಗೊಂಡು ಓಡುವಾಗ ಅವುಗಳ ಕೊಂಬುಗಳು ಮತ್ತು ಕಾಲುಗಳೇ ಆಯುಧ ರೂಪದಲ್ಲಿ ಸೈನ್ಯದಲ್ಲಿ ಇದ್ದವರನ್ನು ಇರಿದು ಅನೇಕ ಮಂದಿ ಸಾಯುತ್ತಾರೆ. ಗೆದ್ದವಲ್ಲಿ ರಾಜನ ಶಸ್ತ್ರಾಸ್ತ್ರಗಳಿಲ್ಲದೇ, ಜನರಿಲ್ಲದೆ ಸೋಲುತ್ತಾನೆ. ಇದನ್ನೆಲ್ಲಾ ಉಪಾಯದಿಂದ ಮಾಡಿದ ಮಲಿಯಮ್ಮನ ಬುದ್ದಿವಂತಿಕೆಯನ್ನು ಮೆಚ್ಚಲೇಬೇಕು. ಹೀಗೆ ದಿಟ್ಟತನದಿಂದ ತಾನೂ ಕೈಯಲ್ಲಿ ಆಯುಧಗಳನ್ನು ಹಿಡಿದು ಹೋರಾಟದಲ್ಲಿ ಭಾಗಿಯಾಗುತ್ತಾಳೆ. ಮಲಿಯಮ್ಮನು ಶಕ್ತಿ ಮತ್ತು ಯುಕ್ತಿಯನ್ನು ಪ್ರಯೋಗಿಸಿದಾಗ ಮಾತ್ರ ಜಯವನ್ನು ಕಾಣಲು ಸಾಧ್ಯ ಎಂದು ತಿಳಿದುಕೊಂಡಿದ್ದಳು. ಬುಡಕಟ್ಟು ಸಮುದಾಯದ ಮಹಿಳೆಯರು ಬದುಕಿನ ಸಹಜತೆಯನ್ನು ಮೈಗೂಡಿಸಿಕೊಂಡವರು. ಇವಳಿಗೆ ತನ್ನ ಅರಿವಿನ ಕ್ರಿಯಾಶೀಲತೆ ಮತ್ತು ತಂತ್ರಗಾರಿಕೆಯಿಂದ ತನ್ನ ಇಡೀ ಮ್ಯಾಸಕಂಪಳವನ್ನು ಮತ್ತು ಪಶುಸಂಪತ್ತನ್ನು ಉಪಾಯದಿಂದ ರಕ್ಷಿಸಿಕೊಳ್ಳುತ್ತಾಳೆ.

ಹೀಗೆ ಮಾನವೀಯ ಗುಣಗಳಿಂದ ಕೂಡಿದ ಮಾತೃತ್ವದ ಸಹಕಾರಿ ಮೂರ್ತಿಯಾದ ಹೆಣ್ಣು. ಇವಳು ತನ್ನ ಬುದ್ದಿಶಕ್ತಿ ಮತ್ತು ತಂತ್ರಗಾರಿಕೆ ಇವೆರಡನ್ನು ಬಳಸಿಕೊಂಡು ಎದುರಾಳಿಗಳನ್ನು ಮಣಿಸುವ ಶಕ್ತಿ ಹೆಣ್ಣಿಗೆ ಇದೆ ಎಂದು ತೋರಿಸಿರುವ ಮಲಿಯಮ್ಮನನ್ನು ಮ್ಯಾಸಬೇಡರು ಆರಾಧ್ಯ ದೇವತೆಯಾಗಿ ಆರಾಧಿಸುತ್ತಾರೆ. ಮಲಿಯಮ್ಮನನ್ನು ಮೊಳಕಾಲ್ಮೂರು ತಾಲೂಕಿಗೆ ಸೇರಿದ ತುಮಕೂರ್ಲಹಳ್ಳಿ, ಮುತ್ತಿಗಾರಹಳ್ಳಿ, ಮರ್ಲಹಳ್ಳಿ ಮತ್ತು ಕೂಡ್ಲಿಗಿ ತಾಲೂಕಿಗೆ ಸೇರಿದ ಜುಮ್ಮೊಬನಹಳ್ಳಿಯಲ್ಲೂ ಮಲಿಯಮ್ಮನನ್ನು ಆರಾಧಿಸುತ್ತಾರೆ. ಈ ದೇವತೆಗೆ ವರ್ಷಕ್ಕೊಮ್ಮೆ ಜಾತ್ರೆಯನ್ನು ಮಾಡುತ್ತಾರೆ. ಇವಳು ಸಮುದಾಯಕ್ಕೆ ನೀಡಿದ ಕೊಡುಗೆಯಿಂದಾಗಿ ಸಮುದಾಯದವರ ಸ್ಮರಣೆಯಲ್ಲಿ ಇಂದಿಗೂ ಉಳಿದು ಬಂದಿದ್ದಾಳೆ.

**ಮಲಿಯಮ್ಮನ ಆರಾಧನೆ**

ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲೂಕಿಗೆ ಸೇರಿದ ಮುತ್ತಿಗಾರಹಳ್ಳಿಯ ಪಕ್ಕ ಕುರುಚಲು ಕಾಡು

ಇದ್ದು ಅಲ್ಲಿ ಮ್ಯಾಸನಾಯಕರ ಹಿರಿಯರನ್ನು ದೈವಿಕ ನೆಲೆಯಲ್ಲಿ ಆರಾಧನೆ ಮಾಡುವ ಮುತ್ತಿಗಾರು ಎತ್ತುಗಳ ರೊಪ್ಪ ಇದೆ. ಇವುಗಳನ್ನು ಕಾಯುವ ಕಿಲಾರಿಗಳು ಸಹ ಅಲ್ಲೇ ಕಾಡಿನ ರೊಪ್ಪಗಳಲ್ಲಿಯೇ ವಾಸ ಮಾಡುತ್ತಾರೆ. ಈ ದೇವರೆತ್ತುಗಳು ಶ್ರೀ ಶೈಲದಿಂದ ಬಂದಿವೆ ಇವುಗಳ ಜೊತೆಯಲ್ಲಿಯೇ ಮಲಿಯಮ್ಮ ಬಂದಿದ್ದಾಳೆ ಎಂಬ ಪ್ರತೀತಿ ಇದ್ದೂ, ಪಶುಗಳನ್ನು ಮತ್ತು ಮ್ಯಾಸಕಂಪಳವನ್ನು ದಾಳಿಯ ಸಂದರ್ಭದಲ್ಲಿ ರಕ್ಷಿಸಿರುವುದರಿಂದ ಇವರು ಮಲಿಯಮ್ಮನಿಗೆ ದೈವದ ಸ್ಥಾನವನ್ನು ನೀಡಿ ಆರಾಧ್ಯಾ ದೇವತೆಯನ್ನಾಗಿ ಮಾಡಿಕೊಂಡು ಪೂಜೆಮಾಡುತ್ತಾರೆ.

ಇಲ್ಲಿ ಮೂರು ವರ್ಷಕ್ಕೊಮ್ಮೆ ಮಲಿಯಮ್ಮನ ಪೂಜೆ ಮಾಡುತ್ತಾರೆ. ಇದನ್ನು ಮಲೆದೇವರ ಹಬ್ಬ ಎಂದೂ ಕರೆಯುತ್ತಾರೆ. ಇಲ್ಲಿ ಹನ್ನೆರಡು ಬೆಡಗಿನವರು ಸೇರಿ ಪೂಜೆ ಮಾಡುತ್ತಾರೆ. ಶ್ರೀ ಶೈಲದಿಂದ ಎರಡನೇ ತಂಡವಾಗಿ ಮಧ್ಯ ಕರ್ನಾಟಕಕ್ಕೆ ಬಂದವರು ಎಂದು, ಹಾಗಾಗಿ 12 ಗುಡಿಸಿಲಿನವರು ಭಾಗವಹಿಸುವುದು ಅಗತ್ಯ. 12 ಗುಡಿಸಿಲಿನವರು ಅಂದರೆ ರಾಬಲು, ಅಜ್ಜಡ್ಲು, ದಾದಗನಾಡು, ಎತ್ತಿನವರು, ಬೋಡೇಪಾಲನವರು, ದಡ್ಡಿಮುತ್ತಿ, ಕ್ಯಾತಪಲು, ಅಬ್ಬನವರು, ಮಲ್ಲೇವಾರು, ದ್ಯಾವರಿಗೋಡ್ಲನವರು, ಮುಡೇಲವರು ಮತ್ತು ಬುಲ್ಲುಡ್ಲುನವರು ಇವರನ್ನೆಲ್ಲಾ 'ಕಡೇಲು ನಾಯಕ' ಎಂಬ ಬೆಡಗಿಗೆ ಸೇರಿದ ವ್ಯಕ್ತಿ ದೇವರ ಎತ್ತುಗಳ ರೊಪ್ಪದ ಬಳಿ ಸೇರಿಸುತ್ತಾನೆ. ಇರೆಲ್ಲರೂ ಸೇರಿ ಮಂಗಳವಾರದಂದು ಮಲಿಯಮ್ಮನ ಜಾತ್ರೆ ಮಾಡಲು ನಿರ್ಧರಿಸುತ್ತಾರೆ. ಆ ದಿನ ಮುತ್ತಿಗಾರು ಎತ್ತುಗಳ ರೊಪ್ಪದ ಬಳಿ ಮಲಿಯಮ್ಮನನ್ನು ಪ್ರತಿಷ್ಠಾಪಿಸಲು ಹಸಿರು ಸೊಪ್ಪಿನಿಂದ ನಿರ್ಮಿಸಿದ ಗುಡಿಸಲನ್ನು ಪದಿ ಎಂತಲೂ ಕರೆಯುತ್ತಾರೆ. ಇದರಲ್ಲಿ ಮಣ್ಣಿನಿಂದ ಮಾಡಿದ ಮಲಿಯಮ್ಮನ ಪ್ರತಿಮೆಯನ್ನು ಇಟ್ಟು ಪೂಜೆ ಮಾಡಿ ವಾಸ್ಯೆ ಕೊಯ್ದು, ಅದರ ಉಲುಸನ್ನು ದೇವರೆತ್ತುಗಳ ರೊಪ್ಪಕ್ಕೆ ಸುತ್ತಲೂ ಮೂರು ಬಾರಿ ಚರಗ ಚೆಲ್ಲುತ್ತಾರೆ. ಕಾರಣ ಹಿಂದೆ ಮಲಿಯಮ್ಮನು ಗೆದ್ದವಲ್ಲಿ ರಾಜನ ಸೈನ್ಯದಿಂದ ತಮ್ಮ ಪಶು ಸಂಪತ್ತನ್ನು ರಕ್ಷಿಸಲು ಇದೇ ತಂತ್ರ ಉಪಯೋಗಿಸಿರುತ್ತಾಳೆ. ಅದನ್ನು ನೆನಪಿಸಿಕೊಳ್ಳುವ ಸಾಂಕೇತಿಕವಾಗಿ ಈ ಆಚರಣೆಯನ್ನು ಮೂರು ಮಂಗಳವಾರ ಮಾಡುತ್ತಾರೆ. ಮಲಿಯಮ್ಮ ದೇವರೆತ್ತುಗಳ ರೊಪ್ಪದ ಸುತ್ತ ಮೂರು ಬಾರಿ ತಿರುಗುತ್ತಾಳೆ. ಇಲ್ಲಿ ಇಡೀ ಮ್ಯಾಸಬೇಡ ಕುಲಸಾವಿರದವರು ಭಾಗಿಯಾಗಿರುತ್ತದೆ. 12 ಗುಡಿಸಿಲಿನವರು ತಂದಿದ್ದ ಕಾಸು ಮೀಸಲು ದೇವರೆತ್ತುಗಳಿಗೆ ಮತ್ತು ಮಲಿಯಮ್ಮನಿಗೆ ಅರ್ಪಿಸುತ್ತಾರೆ. ನಂತರ ಸೂರ್ಯನ ಮೊಕ್ಕು ಎಂದು ನಮಸ್ಕರಿಸಿ ಮುತ್ತೈಗಳ ಸ್ಮರಣೆ ಮಾಡುತ್ತಾರೆ.

**ಮುಂಗಲು ದೇವಮ್ಮ (ಗಲ್ಲಗಲ್ಲು ದೇವಮ್ಮ)**

ಮ್ಯಾಸಬೇಡ ಸಮುದಾಯಕ್ಕೆ ಸೇರಿದ ಮುಂಗಲು ದೇವಮ್ಮ ಕೊಳಗಲು ಬೊಮ್ಮನಾಯಕನ ಅಕ್ಕ. ಇವರಿಬ್ಬರು ಕೂಡಿಯೇ ಶಸ್ತ್ರಾಭ್ಯಾಸ ಮಾಡುತ್ತಿದ್ದರು ಜೊತೆಗೆ ಕಾಡಿನಲ್ಲಿ ಸಂಚರಿಸುತ್ತಾ ಭೇಟೆಯಾಡುತ್ತಿದ್ದರು. ಸಾಂದರ್ಭಿಕವಾಗಿ ತಮ್ಮನಿಗೆ ಯುದ್ಧ ವಿದ್ಯೆಯ ಬಗ್ಗೆ ಸೂಚನೆ ನೀಡುತ್ತಿದ್ದಳು. ಹೀಗಾಗಿ ಕೊಳಗಲ ಬೊಮ್ಮನಿಗೆ ಅಕ್ಕನ ಮೇಲೆ ಎಲ್ಲಿಲ್ಲದ ಅಭಿಮಾನ. ಇವರಿಬ್ಬರೂ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿಗೆ ಸೇರಿದ ಮುತ್ತಿಗಾರಹಳ್ಳಿಗೆ ಹೊಂದಿಕೊಂಡಿರುವ ಕಮರದ ಕಾವಲಿನ ಮಧ್ಯ ಭಾಗದಲ್ಲಿ ಇವರ ವಾಸಸ್ಥಳವಾಗಿತ್ತು. ಇದನ್ನೇ ಪ್ರಸ್ತುತ ಊಟುಕುಂಟೆ ಎಂದು ಕರೆಯಲಾಗುತ್ತದೆ. ಅಲ್ಲಿ ಅರೆಬರೆಯ ಕೋಟೆ ಕೊತ್ತಲುಗಳ ಇಂದಿಗೂ ಸಿಗುತ್ತವೆ. ಇವರಿಬ್ಬರೂ ಮ್ಯಾಸ ಮಂಡಲಕ್ಕೆ ಬಂದ ಆಪತ್ತನ್ನು ಪರಿಹರಿಸಿ ಆ ಮೂಲಕ ಪ್ರಸಿದ್ಧಿ ಪಡೆದರು. ಮ್ಯಾಸಬೇಡರಿಗೆ ಒದಗಿದ ಆಪತ್ತು ಎಂದರೇ ಒಮ್ಮೆ ನರಕಸೂರನ ಕೋಟೆಯಂತಿರುವ ಆನೆಗುಂದಿ ರಾಜನಾದ ನರಪತಿಯು ಈ ಮ್ಯಾಸಬೇಡರ ಹನ್ನೇರಡು ಪೆಟ್ಟಿಗೆ ದೇವರುಗಳನ್ನು ಮತ್ತು ಒಂಭತ್ತು ಅಜ್ಜನವರನ್ನು

ಹಾಗೂ ತಮ್ಮ ಪಶುಗಳನ್ನು ವಶಕ್ಕೆ ತೆಗೆದುಕೊಂಡು ಎಪ್ಪತ್ತೇಳು ಹಟ್ಟಿಗಳನ್ನು ತನ್ನ ಆಧೀನಾದಲ್ಲಿರಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಆಗ ಮ್ಯಾಸಮಂಡಲದ ದೊರೆ ಯರಮಂಚನಾಯಕನು ಇದನ್ನು ತಡೆಯುವ ಪ್ರಯತ್ನ ಮಾಡಿ ವಿಫಲನಾಗುತ್ತಾನೆ. ಅಸಹಾಯಕನಾದ ಈತ ಕೊನೆಗೆ ಒಂದು ದಿನ ಮ್ಯಾಸಮಂಡಲದ ಸಭೆ ಸೇರಿಸಿ ನಿಮ್ಮಲ್ಲಿ ಯಾರಾದರೂ ಧೈರ್ಯದಿಂದ ಹೋರಾಡಿ ನರಪತಿಯನ್ನು ಸೋಲಿಸಿ 12 ಪೆಟ್ಟಿಗೆಗಳನ್ನು ತಮ್ಮ ಪಶು ಸಂಪತ್ತನ್ನು 9 ಅಜ್ಜನವರನ್ನು ಬಿಡುಗಡೆಗೊಳಿಸಿಕೊಂಡು ಬರಲು ಸಾಧ್ಯವೇ ಎಂದು ಕೇಳುತ್ತಾನೆ. ಆಗ ಮ್ಯಾಸ ಕಂಪಳವೇ ಮೌನವಹಿಸುತ್ತದೆ. ಆ ಸಭೆಗೆ ಕೊಳಗಲು ಬೊಮ್ಮನಾಯಕ ತನ್ನ ಸಹೋದರಿಯೊಂದಿಗೆ ಬಂದಿದ್ದ. ಆಗ ದೇವಮ್ಮ ತನ್ನ ಸಹೋದರನಿಗೆ ತಾವಿಬ್ಬರೂ ಸೇರಿ ಹೇಗಾದರೂ ಹೋರಾಡಿ 12 ಪೆಟ್ಟಿಗೆ ದೇವರುಗಳನ್ನು, 9 ಜನ ಅಜ್ಜನವರನ್ನು ಮತ್ತು ಪಶು ಸಂಪತ್ತನ್ನು ಬಿಡಿಸಿಕೊಂಡು ಬರಲು ತೀರ್ಮಾನಿಸಿ ತನ್ನ ತಮ್ಮನಿಗೆ ಒಪ್ಪಿಸಿ ವೀಳ್ಯೆವನ್ನು ತೆಗೆದುಕೊಂಡರು. ಇದನ್ನು ಒಪ್ಪಿಕೊಂಡ ನಂತರ ಮೂರು ದಿನದ ಒಳಗಾಗಿ ನರಕದ ಕೋಟೆಯನ್ನು ಭೇದಿಸಿ ಪೆಟ್ಟಿಗೆಗಳನ್ನು ಹೊರ ತರಬೇಕೆಂದು ತೀರ್ಮಾನವಾಗುತ್ತದೆ. ಅಂದಿನಿಂದಲೇ ದೇವಮ್ಮ ತಮ್ಮನಿಗೆ ಕೋಟೆಯನ್ನು ಪ್ರವೇಶಿಸಲು ಬೇಕಾದ ಕಾರ್ಯತಂತ್ರವನ್ನು ರೂಪಿಸುತ್ತಾಳೆ. ಕೊನೆಗೆ ನರಕದ ಕೋಟೆಯನ್ನು ಭೇದಿಸಿ ಹನ್ನೇರಡು ಪೆಟ್ಟಿಗೆ ದೇವರನ್ನು ಮತ್ತು ಪಶುಸಂಪತ್ತನ್ನ ತಂದು ಸಮುದಾಯಕ್ಕೆ ಒಪ್ಪಿಸುತ್ತಾರೆ.

**ಕೆಂಚ್ಚವ್ವ–ಕಾಮವ್ವ**

ಮ್ಯಾಸಬೇಡರ ಸಾಂಸ್ಕೃತಿಕನಾಯಕರಲ್ಲಿಯೇ ಪ್ರಸಿದ್ಧವಾದವರು ಗಾದ್ರಿಪಾಲನಾಯಕ. ಈತನನ್ನು ಮ್ಯಾಸನಾಯಕರ ದೈವಪುರುಷ ಎಂದು ಕರೆಯುತ್ತಾರೆ. ಗಾದ್ರಿಪಾಲನಾಯಕ ತಮ್ಮ ಪಶು ಸಂಪತ್ತಿಗಾಗಿ ಮತ್ತು ಅವರ ಕೊಟ್ಟ ಭಾಷೆಗಾಗಿಯೇ ತನ್ನ ಜೀವನವನ್ನೇ ಮುಡುಪಾಗಿಟ್ಟು ದೈವತ್ವವನ್ನು ಹೊಂದಿದವನು ಎಂದು ಹೇಳಬಹುದು. ಗಾದ್ರಿಪಾಲನಾಯಕನು ಪಶುಗಳೊಂದಿಗೆ ಶುಕ್ಲಗಿರಿ (ಈಗಿನ ನನ್ನಿವಾಳ) ಹತ್ತಿರ ವಾಸವಾಗಿದ್ದರು. ಇವರು ಕಾಡಿನಲ್ಲಿ ವಾಸ ಮಾಡುತ್ತಿದ್ದರಿಂದ ಸದಾ ಕ್ರೂರ ಪ್ರಾಣಿಗಳ ಭಯದ ನೆರಳಿನಲ್ಲಿಯೇ ತನ್ನ ಪಶು ಸಂಪತ್ತನ್ನು ಕಾಪಾಡುತ್ತಿದ್ದನು. ಗಾದ್ರಿಪಾಲನಾಯಕನ ಹೆಂಡತಿಯರಾದ ಕೆಂಚ್ಚವ್ವ–ಕಾಮವ್ವ ಸಹ ಈ ಪಶು ಸಂಗೋಪನೆಯ ಕೆಲಸ ಕಾರ್ಯಗಳಲ್ಲಿ ಭಾಗವಹಿಸುತ್ತಾರೆ. ಪಶುಗಳು ಮೇವಿಗಾಗಿ ಕಾಡಿಗೆ ಹೋದಾಗ ರೊಪ್ಪದಲ್ಲಿ ಉಳಿದ ಕರುಗಳನ್ನು ನೋಡಿಕೊಳ್ಳುವುದು ಮತ್ತು ಅದರ ಜೊತೆಗೆ ಹತ್ತಿರದ ಹಳ್ಳಿಗಳಿಗೆ ಹೋಗಿ ಹಾಲು ತುಪ್ಪ ಮಾರಾಟ ಮಾಡಿ, ದವಸ ಧಾನ್ಯಗಳನ್ನು ತರುತ್ತಿದ್ದರು. ದನಕರುಗಳ ಗೂಡಿಗೆ ಹಾವಿನ ಕಾಟ ಸಾಮಾನ್ಯವಾಗಿತ್ತು ಇದರಿಂದ ಹಾವುಗಳನ್ನು ಹೊಡೆದುಹಾಕುವುದರ ಮೂಲಕ ದನ ಕರುಗಳನ್ನು ರಕ್ಷಣೆ ಮಾಡುತ್ತಿದ್ದರು. ಗಾದ್ರಿಪಾಲನಾಯಕನು ಪಶುಗಳೊಂದಿಗೆ ಕಾಡಿನಲ್ಲಿ ವಾಸ ಮಾಡಿತ್ತಿದ್ದನು. ಅಲ್ಲಿ ಕ್ರೂರ ಪ್ರಾಣಿಗಳಿಂದ ರಕ್ಷಣೆಗಾಗಿ ಹುಲಿಯೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳುತ್ತಾನೆ. ಪಾಲನಾಯಕನು ದನಕರುಗಳನ್ನು ಮೇಯಿಸಲು ಹೋಗಿರುತ್ತಾನೆ. ಕೆಂಚವ್ವ ಕಾಮವ್ವ ಹಳ್ಳಿಗಳಿಗೆ ಹಾಲು ಮಾರಲು ಹೋದ ಸಂದರ್ಭದಲ್ಲಿ ರೊಪ್ಪದಲ್ಲಿ ಕರುಗಳು ಮತ್ತು ಹುಲಿಮರಿಗಳು ಆಟವಾಡುತ್ತಿರುವಾಗ ಅಲ್ಲಿಗೆ ಬಂದ ಚಿನ್ನಪಾಲನಾಯಕನು ರೊಪ್ಪದಲ್ಲಿ ಕರುಗಳ ಜೊತೆ ಹುಲಿ ಮರಿಗಳನ್ನು ನೋಡಿ ಗಾಬರಿಗೊಂಡು ಹುಲಿಮರಿಗಳನ್ನು ಕೊಂದು ಹಾಕುತ್ತಾನೆ. ಸಂಜೆ ಪಾಲನಾಯಕನು ರೊಪ್ಪಕ್ಕೆ ದನಗಳನ್ನು ಹೊಡೆದುಕೊಂಡು ಬಂದಾಗ ಅಲ್ಲಿ ಹುಲಿಮರಿಗಳು ಸತ್ತು ಬಿದ್ದಿದ್ದವು. ಇದನ್ನು ನೋಡಿ ದಿಕ್ಕು ತೋಚದಂತಾಗುತ್ತದೆ. ಪಾಲನಾಯಕನು ಕೊಟ್ಟ ಮಾತಿಗೆ ತಪ್ಪಿದಂತಾಯಿತು ಎಂದು ನೊಂದುಕೊಳ್ಳುತ್ತಾ ಮೊದಲು ಹುಲಿಗಳು

ಬರುವಷ್ಟರಲ್ಲಿ ತನ್ನ ಪಶುಗಳನ್ನು ಹೊಡೆದುಕೊಂಡು ಜಾಗ ಖಾಲಿ ಮಾಡಬೇಕೆಂದು ಅಲ್ಲಿಂದ ಹೊರಡುತ್ತಾನೆ. ಅಷ್ಟರಲ್ಲಿ ಹುಲಿಗಳು ಬಂದು ರೊಪ್ಪದಲ್ಲಿ ನೋಡಿದಾಗ ತನ್ನ ಹುಲಿ ಮರಿಗಳು ಸತ್ತು ಬಿದ್ದಿದ್ದವು. ಇದನ್ನು ನೋಡಿ ರೋಷದಿಂದ ಹುಲಿಗಳು ಪಾಲನಾಯಕನನ್ನು ಮತ್ತು ಪಶುಗಳನ್ನು ಕೊಲ್ಲಬೇಕೆಂದು ಅವರನ್ನು ಹಿಮ್ಮೆಟ್ಟಿಸಿಕೊಂಡು ಬರುತ್ತವೆ. ಅಲ್ಲಿ ಪಾಲನಾಯಕನಿಗೂ ಮತ್ತು ಹುಲಿ ಮಧ್ಯ ಕಾಳಗ ನಡೆದು ಗಂಡು ಹುಲಿಯು ಸಾಯುತ್ತದೆ. ಸಂಗಾತಿಯನ್ನು ಮತ್ತು ತನ್ನ ಮರಿಗಳನ್ನು ಕಳೆದುಕೊಂಡ ಹೆಣ್ಣು ಹುಲಿಯು ಆಕ್ರಮಣ ಮಾಡಲು ಬಂದೆ ಬರುತ್ತದೆ ಎಂದು ಪಾಲನಾಯಕನು ಅಲ್ಲಿಂದ ತನ್ನ ದನಗಂಪಳ ಮತ್ತು ಜನಗಂಪಳದೊಂದಿಗೆ ಬೇರೆ ಕಡೆ ಹೊರಟು ಮಿಂಚೇರಿ ಅರಣ್ಯ ಸೇರುತ್ತಾರೆ. ಅಲ್ಲಿಗೂ ಹೆಣ್ಣು ಹುಲಿ ಹುಡುಕಿಕೊಂಡು ಬರುತ್ತದೆ. ಪಾಲನಾಯಕನಿಗೂ ಹುಲಿಗೂ ಹೋರಾಟ ನಡೆಯುತ್ತದೆ. ಈ ಹೋರಾಟದಲ್ಲಿ ಪಾಲನಾಯಕ ಮತ್ತು ಹೆಣ್ಣು ಹುಲಿ ಇಬ್ಬರೂ ಸಾಯುತ್ತಾರೆ. ಕೆಂಚವ್ವ ಕಾಮವ್ವ ಪ್ರತಿದಿನ ರೊಪ್ಪದ ಹಸುಗಳಿಂದ ಹಾಲನ್ನು ಕರೆದು ಮೊಸರು ಮಜ್ಜಿಗೆ, ಬೆಣ್ಣೆಯನ್ನು ಮಾಡಿ. ಇವುಗಳನ್ನು ಮಾರಲು ಹೋಗುವಾಗ ಹಾಲು ಮೊಸರು ಮಾರಿ ಬರುವಾಗ ತುಂಬಾ ಬಾಯಾರಿಕೆ ಆಗುತ್ತದೆ. ಆಗ ಕೆಂಚವ್ವ ಕಾಮವ್ವ ದಾರಿ ಮಧ್ಯದಲ್ಲಿ ಬರುವಂತಹ ಅರವಿನಹಳ್ಳ (ಹರವೊಂಕ) ದ ಹತ್ತಿರ ಚಿಲುಮೆಯನ್ನು ತೆಗೆದು ನೀರು ಕುಡಿಯುವಾಗ ಚಿಲುಮೆಯಲ್ಲಿ ನೀರಿನ ಬದಲು ರಕ್ತ ಬರುತ್ತದೆ. ಇದನ್ನು ನೋಡಿ ಅವರು ಗಾಬರಿಗೊಂಡು ರೊಪ್ಪದ ಬಳಿ ಬಂದು ನೋಡಿದಾಗ ಪಾಲನಾಯಕನು ಮರಣ ಹೊಂದಿರುತ್ತಾನೆ. ಇದನ್ನು ನೋಡಿ ಕೆಂಚವ್ವ ಕಾಮವ್ವ ಕಂಗಾಲಾಗಿ "ಗಂಡ ತೀರಿಕೊಂಡ ಮೇಲೆ ತಾವಿದ್ದು ಏನು ಸಾರ್ಥಕ ಎಂದು ಚಿಂತಿಸುತ್ತಾ ಪಾಲನಾಯಕನ ಸತ್ತ ಮೂರನೇಯ ದಿನದ ಕರ್ಮಗಳನ್ನು ತೀರಿಸಿ ತಾವು ಗಂಜಿಗಟ್ಟೆಯ ಕಡೆ ಹೋಗಿ ಊರ ಗೌಡನ ಒಪ್ಪಿಗೆ ಪಡೆದು ಅರಿಶಿಣ ಕುಂಕುಮ ಗಂಧದ ಚಕ್ಕೆ ಪಡೆದು ಬಂದು ಸಹಗಮನ ಮಾಡುತ್ತಾರೆ". ಗಂಜಿಗಟ್ಟೆಯಲ್ಲಿ ಸತಿಸಹಗಮನ ಆಗಿರುವ ಶಾಸನಗಳು ಸಿಗುತ್ತಿದ್ದು. ಈ ಸ್ಥಳವನ್ನು ಮ್ಯಾಸಬೇಡರ ರೊಪ್ಪಗಳ ಪ್ರಾಚೀನ ನೆಲೆಯೆಂದು ಹೇಳಬಹುದಾಗಿದೆ. ಹೀಗೆ ಕೆಂಚವ್ವ ಕಾಮವ್ವ ತನ್ನ ಗಂಡನೊಂದಿಗೆ ಸದಾ ಜೊತೆಯಾಗಿ ನಡೆದವರು. ಪಾಲನಾಯಕನು ಹುಲಿಯೊಂದಿಗೆ ಹೋರಾಡಿದರೆ ಇವರು ಪಶುಗಳ ಗೂಡಿಗೆ ಕಾಟ ಕೊಡುತ್ತಿದ್ದ ಹಾವಿನ ಜೊತೆ ಸೆಣಸಾಡಿ ತಮ್ಮ ಪಶುಗಳನ್ನು ರಕ್ಷಣೆ ಮಾಡಿದವರು. ಜೊತೆಗೆ ಹಾಲು ಮಾರಾಟ ಮಾಡಿ ತನ್ನ ಕುಟುಂಬವನ್ನು ನಿರ್ವಹಣೆ ಮಾಡುತ್ತಿದ್ದರು. ಹೀಗಾಗಿ ಇವರನ್ನು ಪೂಜಿಸುವುದು ಕಂಡುಬರುತ್ತದೆ.

**ವಡೇಲು ಮಾರಮ್ಮನ**

ಮ್ಯಾಸಬೇಡರಿಗೆ ಆರಾಧ್ಯದೇವತೆಯೆನಿಸಿರುವ ವಡೇಲು ಮಾರಮ್ಮ ಇವಳು ದಾನಸಾಲಮ್ಮ ಮತ್ತು ಶುಕ್ಲ ಮಲ್ಲಿನಾಯಕನ ಮಗಳು ಎಂಬುದು ಸ್ಪಷ್ಟವಾಗುತ್ತದೆ. ಚಂಚರಿಂದ ಪೋಷಿಸಲ್ಪಟ್ಟ ಈತ ಸಂಚು ಸಿಕನಾಯಕ ಎಂದು ಕರೆಯಲ್ಪಡುತ್ತಾನೆ. ಗಿಡಗಂಟೆಗಳ ರಾಜ ಎಂದೂ ಕರೆಯಲಾಗುತ್ತದೆ. ಈತ ಮಂದರಾಜನ ಮೊಮ್ಮಗಳಾದ ದಾನಸಾಲಿಯಮ್ಮಳನ್ನು ಮದುವೆಯಾಗಿ, ಈತನ ಸಂತತಿಯವರೇ ಮುಂದೆ 'ಸಂಚು ಮ್ಯಾಸವಾಳ್ಳು' ಅಂದರೆ ಸಂಚು ಮ್ಯಾಸನಾಯಕರು, ಮ್ಯಾಸನಾಯಕರು, ಮ್ಯಾಸಬೇಡರು ಎಂದು ಕರೆಯಲ್ಪಟ್ಟರು. ದಾನಸಾಲಿ ಮತ್ತು ಈ ಸಂಚುಸಿಕನಾಯಕನ ಮಗಳೇ ವಡೇಲು ಮಾರಮ್ಮ. ಈಕೆಯ ಜನನವೇ ವಿಶಿಷ್ಟವಾದುದು. ಮದುವೆಯಾಗಿ ಅನೇಕ ವರ್ಷಗಳು ಕಳೆದರೂ ಇವರಿಗೆ ಮಕ್ಕಳಿರುವುದಿಲ್ಲ. ಒಮ್ಮೆ ಜಂಗಮನೊಬ್ಬ ನೀಡಿದ ಕುಂಬಳ ಬೀಜ ನೆಡುವಾಗ ದಾನಸಾಲಿಯಮ್ಮ ಸೂರ್ಯನ ಧ್ಯಾನ ಮಾಡುತ್ತಾ ಆ ಸೂರ್ಯನನ್ನೇ ಭ್ರಮಿಸಲು ಕಿರಣಗಳ ಮೂಲಕ ಸೂರ್ಯನ

ಅಂಶವೇ ಈ ಕುಂಬಳ ಬೀಜದ ಮೇಲೆ ಬಿದ್ದು ಆ ಬೀಜನೆಡಲು ಅದು ಬಳ್ಳಿಯಾಯಿತು. ಅದರ ತುಂಬಿನಿಂದ ಹುಟ್ಟಿದವಳೆ ಈ ವಡೇಲು ಮಾರಮ್ಮ ಎಂದು ಕರೆಯುತ್ತಾರೆ. ಇನ್ನೂ ಕುಂಬಳಕಾಯಿ ಯಿಂದ ಹುಟ್ಟಿದ ಐದು ಜನರು ಇವಳ ತಮ್ಮಂದಿರು ಎಂದು ಹೇಳುತ್ತಾರೆ. ಆ ಐದು ಜನರ ತಮ್ಮಂದಿರನ್ನು ವಡೇಲು ಮಾರಮ್ಮನೇ ಸಾಕುತ್ತಾಳೆ. ಮಕ್ಕಳನ್ನು ನಿಮ್ಮ ತಂದೆ ಯಾರು ಎಂದು ಹುಡುಗರನ್ನು ಅಪಹಾಸ್ಯ ಮಾಡುತಿರುತ್ತಾರೆ. ಆ ಐದು ಜನರು ತನ್ನ ಅಕ್ಕನೊಂದಿಗೆ ಬಂದು ನಮ್ಮ ತಂದೆಯಾರು ಎಂದು ಪೀಡಿಸುತ್ತಾರೆ. ಆಕೆ ಈ ರೀತಿ ವಿವರವನ್ನು ಕೊಡುತ್ತಾಳೆ. ಮೊದಲು ಹುಟ್ಟಿ ಬರುವ ಸೂರ್ಯನೇ ನಮ್ಮ ತಂದೆ ಎಂದು ಹೇಳುತ್ತಾಳೆ. ಹಾಗಾದರೆ ಆತನನ್ನು ನಮ್ಮ ತಂದೆ ಎಂದು ಒಪ್ಪಿಸಿಕೊಂಡು ಬರುತ್ತೇವೆ ಎಂದು ಅವರು ಹೊರಟಾಗ ಇದ್ದಕ್ಕಿದ್ದಂತೆಯೇ ಹೊರಟರೆ ಅದು ಸಾಧ್ಯವಾಗುವುದಿಲ್ಲ. ಅದಕ್ಕೆ ತಯಾರಿ ಅಗತ್ಯವಿದೆ ಎಂದು ಅವರಿಗೆ ಯುದ್ಧವನ್ನು ಕಲಿಸುತ್ತಾಳೆ. ಇನ್ನೂ ತನ್ನ ತಮ್ಮಂದಿರ ಪ್ರಯಾಣದ ಭತ್ಯೆಗಾಗಿ ಕಡಲೆಯನ್ನು ಬಿತ್ತಿ ಈ ಹೊಲವನ್ನು ಕಾಯಲು ತನ್ನ ಸೋದರ ಮಾವನಾದ ಕರಿಬೊಮ್ಮನನ್ನು ನೇಮಿಸಿ ಇಲ್ಲಿ ಬರುವ ಕುದುರೆಗಳನ್ನು ಹೊಡೆಯಲು ಉಕ್ಕಿನ ಚಾವಟಿಯನ್ನು ಮಾಡಿಸಿಕೊಡುತ್ತಾಳೆ. ಸಾಮಾಜಿಕ ಅಪಮಾನದಿಂದ ತತ್ತರಿಸಿದ ತಮ್ಮಂದಿರನ್ನು ಹೋರಾಟಕ್ಕೆ ಅಣಿಗೊಳಿಸಿ ಶಸ್ತ್ರಾಸ್ತ್ರಗಳನ್ನು, ಕುದುರೆಗಳನ್ನೂ ಕೊಟ್ಟು ತಂದೆಯ ವಿರುದ್ಧ ದಾಳಿಗೆ ಕಳುಹಿಸುತ್ತಾಳೆ.

ನಂತರ ವಡೇಲುಮಾರಮ್ಮನ ತಮ್ಮಂದಿರಲ್ಲಿ ಒಬ್ಬರ ಮಗನಾದ ಕಾಟಮಲ್ಲಿನಾಯಕ ತನ್ನ ಪಶುಗಳನ್ನು ಮತ್ತು ಬೇಡಗಂಪಳದೊಂದಿಗೆ ಶ್ರೀಶೈಲದಿಂದ ಮಧ್ಯ ಕರ್ನಾಟಕದ ಕಡೆ ಬರುತ್ತಿರುವಾಗ ಆನೆಗೊಂದಿಯ ದೊರೆ ಇವರ ಪಶುಸಂಪತ್ತನ್ನು ತನ್ನದಾಗಿಸಿಕೊಳ್ಳಬೇಕು ಎಂದು ಸೆರೆ ಹಿಡಿದಾಗ ಮೂಲನೆಲೆಯಲ್ಲಿಯೇ ಉಳಿದಿದ್ದ ವಡೇಲು ಮಾರಮ್ಮ ಈ ಸಂಗತಿಯನ್ನು ತಿಳಿದು ತಕ್ಷಣವೇ ಬಂದು ಮಂತ್ರವಿದ್ಯೆಯನ್ನು ಬಳಸಿಕೊಂಡು, ತನ್ನ ಬೇಡಗಂಪಳವನ್ನು ಅಪತ್ತಿನಿಂದ ಪಾರು ಮಾಡುತ್ತಾಳೆ. ಈ ತಂತ್ರದ ಮೂಲಕ ವಡೇಲುಮಾರಮ್ಮ ತಮ್ಮವರಿಗೆ ಎದುರಾಗಿದ್ದ ವಿಪತ್ತನ್ನು ಪರಿಹರಿಸುವಲ್ಲಿ ಅವಳ ಚಾಣಾಕ್ಷತನವನ್ನು ತೋರಿಸುತ್ತಾಳೆ. ನಂತರ ತನ್ನ ಬೇಡಗಂಪಳ ನಾಯಕನಹಟ್ಟಿ ಪ್ರಾಂತ್ಯದಲ್ಲಿ ನೆಲೆಸಿದಾಗ ಪಶುಸಂಪತ್ತನ್ನು ವಶಪಡಿಸಿಕೊಳ್ಳಲು ನಿಡುಗಲ್ಲಿನ ಹೊಟ್ಟೆಣ್ಣನಾಯಕ ಆಕ್ರಮಣ ಮಾಡಿ 14 ದಿನಗಳ ಕಾಲ ದನಕರು ಸಹ ಮೇಯಲು ಹೊರಗಡೆ ಹೋಗದಂತೆ ದಿಗ್ಬಂಧನ ಹಾಕಿದಾಗ ನಾಯಕರ ಪ್ರತಿ ಹೋರಾಟ ಫಲಪ್ರದವಾಗುವುದಿಲ್ಲ. ಆಗ ವೃದ್ಧಾಪ್ಯದಲ್ಲಿದ್ದರೂ ವಡೇಲುಮಾರಮ್ಮ ಕಾರ್ಯತಂತ್ರವನ್ನು ರೂಪಿಸಿ ಪ್ರತಿದಾಳಿ ನಡೆಸಿದಾಗ ಹೊಟ್ಟಣ್ಣನಾಯಕನು ಹೆದರಿ ಹಿಂದಿರುಗುತ್ತಾನೆ. ಆ ಸ್ಥಳದಲ್ಲಿ ರಣಗಂಬಗಳನ್ನು ನೆಟ್ಟಿದ್ದಾರೆ.

ಹೀಗೆ ವಡೇಲುಮಾರಮ್ಮ ತನ್ನಲ್ಲಿದ್ದ ಯುಕ್ತಿ ಮತ್ತು ಶಕ್ತಿಗಳ ಮೂಲಕ ಸಮುದಾಯದ ಆಂತರಿಕ ಸಮಸ್ಯೆಗಳನ್ನೂ ಮತ್ತು ಹೊರಗಿನಿಂದ ಬರುವ ಸಮಸ್ಯೆಗಳನ್ನು ಮುಖ್ಯವಾಗಿ ಆಕ್ರಮಣಕಾರಿ ಪ್ರಭುತ್ವವನ್ನು ಹಿಮ್ಮೆಟ್ಟಿಸಿ ತನ್ನ ಸಂಸ್ಕೃತಿಯ ರಕ್ಷಣೆ ಮಾಡುತ್ತಾಳೆ. ವಡೇಲು ಮಾರಮ್ಮನ ಬದುಕಿನ ಒಟ್ಟು ನಡೆಯನ್ನು ಗಮನಿಸಿದಾಗ ಕಥನದಲ್ಲಿಯೇ ಹೇಳಿರುವಂತೆ, ಆಕೆ ಕಡುಜಾಣೆ, ಆಕೆಯ ಶಕ್ತಿ, ಕುಶಲತೆಯಂತೂ ಆಕೆಯನ್ನೂ ಸಾಂಸ್ಕೃತಿಕ ನಾಯಕಿ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಹೀಗಾಗಿ ವಡೇಲು ಮಾರಮ್ಮನನ್ನು ಮ್ಯಾಸಬೇಡರು ಅನೇಕ ನೆಲೆಗಳಲ್ಲಿ ಪೂಜಿಸುವುದನ್ನು ಕಾಣಬಹುದು. ಮುಖ್ಯವಾಗಿ ಚಳ್ಳಕೆರೆ ತಾಲೂಕಿನ ಮಲ್ಲೂರಳ್ಳಿಯ ಸಮೀಪದ ಮ್ಯಾಸರ ಹಟ್ಟಿಯಲ್ಲಿ ವಡೇಲು ಮಾರಮ್ಮ ಆರಾಧನಾ ನೆಲೆಯನ್ನು ಕಾಣಬಹುದಾಗಿದ್ದು. ಇಲ್ಲಿಯೇ ವಡೇಲು ಮಾರಮ್ಮನ ರೊಪ್ಪ ಇರುವುದು ಕಂಡುಬರುತ್ತದೆ. ಈ ರೊಪ್ಪದಲ್ಲಿ ಇಂದಿಗೂ

ಸತ್ಯವೆಂಬಂತೆ ಅನೇಕ ಆಚರಣೆಗಳನ್ನು ಮತ್ತು ನಂಬಿಕೆಗಳನ್ನು ಕಾಣಬಹುದಾಗಿದೆ.

**ಶೂನ್ಯದ ಮಾರಮ್ಮ**

"ಶೂನ್ಯದ ಅಮವಾಸೆಯಲ್ಲಿ ಚಳಿ ಬಹಳಷ್ಟು ಇರುತ್ತದೆ, ಹಾಗಾಗಿ ದನ ಕರುಗಳಿಗೆ ಕಾಲು ಬಾಯಿಯ ರೋಗ ಜಾಸ್ತಿಯಾಗುತ್ತದೆ. ಅದಕ್ಕಾಗಿ ಆ ರೋಗದಿಂದ ಪಾರಾಗಬೇಕಾದರೆ ದೇವರೆತ್ತುಗಳಲ್ಲಿ ಮಾರಮ್ಮನನ್ನು ತಂದು ಆ ಮಾರಮ್ಮನಿಗೆ ವಾಸ್ಯೆ ಕೊಯ್ಯಿದು ಶಾಂತಿ ಮಾಡುವುದರಿಂದ ಈ ಜಾಡು ನಿವಾರಣೆಯಾಗುತ್ತದೆ ಎಂಬ ನಂಬಿಕೆ. ಹಾಗಾಗಿ ಶೂನ್ಯದ ಮಾರಮ್ಮನ ಗೂಡನ್ನು ಆಚರಿಸುತ್ತಾರೆ. ಇನ್ನೊಂದು ನಂಬಿಕೆಯ ಪ್ರಕಾರ ಆದಿಶಕ್ತಿಯ ಆರಾಧಕರಾದ ಬೇಡರು ಆ ದೇವತೆಯು ನಮ್ಮ ದನಕರುಗಳ ಮೇಲೆ ಮುನಿಸಿಕೊಂಡು ಅವುಗಳಿಗೆ ಜ್ವರ, ಕಾಲು, ಬಾಯಿಯ ರೋಗವನ್ನು ನೀಡುತ್ತಾಳೆಂದು ಶೂನ್ಯದ ಅಮವಾಸೆಯಲ್ಲಿ ನನ್ನಿವಾಳದ ಕಟ್ಟೆಮನೆಯ ದೇವರುಗಳನ್ನು ಕರೆತಂದು ಹೊಸ ಉದಿಪದಿಗಳನ್ನು ಕಟ್ಟಿ, ಶೂನ್ಯದ ಮಾರಮ್ಮನನ್ನು ಪ್ರತಿಷ್ಠಾಪಿಸಿ ಆ ರಾತ್ರಿ ದೇವರೆತ್ತುಗಳನ್ನು ಪಚ್ಚಿ ಪದಿಯೊಳಗೆ ಕೂಡಿ, ಮಾರಮ್ಮನಿಗೆ ಮತ್ತು ದೇವರುಗಳಿಗೆ ವಾಸ್ಯೆಯನ್ನು ಕೊಯ್ಯಿದು ಮಾರಮ್ಮನಿಗೆ ನಮ್ಮ ದೇವರೆತ್ತುಗಳಿಗೆ ಯಾವುದೇ ಕಾಟ ಕೊಡಬೇಡ ತಾಯಿ ಎಂದು ಕೈ ಮುಗಿದು ಮಾರಮ್ಮನನ್ನು ಸಂತೃಪ್ತಿ ಪಡಿಸುತ್ತಾರೆ. ಈ ಹಬ್ಬವನ್ನು ಮಾಡುವುದರಿಂದ ದೇವರೆತ್ತುಗಳಿಗೆ ಯಾವುದೇ ರೋಗ ರುಜಿನಗಳು ಬರುವುದಿಲ್ಲವೆಂಬುದು ಅಲ್ಲಿನ ಜನರ ನಂಬಿಕೆಯಾಗಿದೆ" ಹೀಗಾಗಿ ಬೊಮ್ಮದೇವರು, ಗಾದರಿದೇವರು, ಬೋಸೆರಂಗ, ಬಂಗಾರು ದೇವರು, ಓಬಳದೇವರು ಈ ಐದು ದೇವರುಗಳಿಗೆ ಅಕ್ಕನೇ ಈ ಶೂನ್ಯದ ಮಾರಮ್ಮ ಅದ್ದರಿಂದ ಈ ಐದು ದೇವರು ಕೂಡುವ ಈ ಸ್ಥಳಕ್ಕೆ ಮಾರಮ್ಮನನ್ನು ಕರೆತಂದು ಅಕ್ಕನನ್ನು ತವರುಮನೆಗೆ ಕರೆತಂದು ಅವಳಿಗೆ ಹೊಸ ಸೀರೆ, ಬಳೆ, ಹುಡಿಯನ್ನು ತುಂಬಿಸಿ, ವಾಸ್ಯೆ ಕೊಯ್ಯಿದು ಸಂತೃಪ್ತಿ ಮಾಡುತ್ತಾರೆ. ಅಕ್ಕನು ವರ್ಷದಲ್ಲಿ ಒಂದು ಬಾರಿ ಬಂದು ತಮ್ಮ ಹೊಸ ಪದಿಯಲ್ಲಿ ನಿದ್ರಿಸಿ ದೇವರೆತ್ತುಗಳಲ್ಲಿ ಹಾಡಿ ತೃಪ್ತಿಯಿಂದ ತನ್ನ ಗಂಡನ ಮನೆಗೆ ಹೋಗುವ ಸಂಪ್ರದಾಯವೇ ಈ ಶೂನ್ಯದ ಮಾರಮ್ಮನ ಗೂಡಿನ ಹಬ್ಬದ ಹಿನ್ನಲೆ. ಇದೊಂದು ಪಶುಗಳಿಗೆ ಸಂಬಂಧಿಸಿರುವಂತಹ ಹಬ್ಬವಾಗಿರುತ್ತದೆ ಎಂಬುದಾಗಿ ಇಲ್ಲಿನ ಆಚರಣೆಗಳಿಂದ ತಿಳಿದು ಬರುತ್ತದೆ.

ಆಹಾರ ಸಂಗ್ರಹಣೆಯನ್ನಾಧರಿಸಿದ ಸಮುದಾಯಗಳು ಸಾಧಾರಣವಾಗಿ ಮಾತೃ ದೇವತೆಗಳನ್ನು ಆರಾಧಿಸುವ ಪದ್ಧತಿಯನ್ನು ಹೊಂದಿರುತ್ತವೆ. ಬುಡಕಟ್ಟುಗಳಲ್ಲಿನ ವ್ಯವಸ್ಥೆಯೂ ಕೂಡ ಮಾತೃ ಪ್ರಧಾನ ಕುಟುಂಬದ ವ್ಯವಸ್ಥೆಯೆ ಆಗಿರುತ್ತದೆ. ಎರಡನೇ ಹಂತವಾದ ಪಶುಪಾಲಕತನಕ್ಕೆ ಬಂದಾಗ ಅಲ್ಲಿ ಕಾಣಿಸಿಕೊಳ್ಳುವುದೇ ಪಿತೃ ಪ್ರಧಾನ್ಯತೆ ಮತ್ತು ಅದರೊಂದಿಗೆ ಪುರುಷ ದೇವರುಗಳ ಆರಾಧನೆ "ಈ ಪುರುಷ ದೇವರುಗಳು ಸಾಮಾನ್ಯವಾಗಿ ಆಯಾ ಸಮುದಾಯಕ್ಕೆ ಸಂಬಂಧಿಸಿದ ಸಾಂಸ್ಕೃತಿಕ ನಾಯಕರೇ ಆಗಿರುತ್ತಾರೆ. ಚರಿತ್ರೆಯ ಪರಿಕ್ರಮದಲ್ಲಿ ಮಾತೃದೇವತೆಗಳನ್ನು ಆರಾಧಿಸುವ ಪಶುಪಾಲಕರು ಕಂಡುಬರುತ್ತಾರೆ." ಈ ಹಿನ್ನೆಲೆಯಲ್ಲಿ ಪಶುಪಾಲಕರಲ್ಲಿಯೂ ಅನೇಕ ಮಾತೃದೇವತೆಗಳನ್ನು ಆರಾಧಿಸುವ ಪರಿಪಾಠವಿದೆ. ಪಶುಪಾನೆಯಲ್ಲಿ ಬರೀ ಪುರುಷನಷ್ಟೇ ಪಶುಪಾಲನಲ್ಲ ಅವನೊಂದಿಗೆ ಮಹಿಳೆಯೂ ಈ ವೃತ್ತಿಯಲ್ಲಿ ಪಾಲ್ಗೊಳ್ಳುವುದು ಅನಿವಾರ್ಯವಾಗಿರುತ್ತದೆ. ಕೃಷಿಗೂ ಹಾಗೂ ಇತರೆ ಕಸಬುಗಳಿಗೂ ಇದು ಅನ್ವಯಿಸುತ್ತದೆ. ದನ ಮೇಯಿಸಲು ಪುರುಷ ಕಾಡಿಗೆ ಹೋದರೆ ಹಟ್ಟಿಯ ಬಳಿಯ ಗೂಡಿನ ಕರು ಮತ್ತು ಮರಿಗಳನ್ನು ಪೋಷಿಸುವುದು, ಹೈನುಗಾರಿಕೆ ಮಾಡುವುದು ಮಹಿಳೆಯ ಹೊಣೆಗಾರಿಕೆಯಾಗಿರುತ್ತದೆ. ಹೀಗೆ ಮಹಿಳೆಯರು ಪಶುಪಾಲನೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಅಷ್ಟಲ್ಲದೇ ಈ ಸಮುದಾಯ ತಮ್ಮ ಜಾಣ್ಮೆ, ಸಾಹಸಗಳಿಂದ ಸಮುದಾಯದ

ರಕ್ಷಣೆಯನ್ನು ಮತ್ತು ಪಶುಗಳ ರಕ್ಷಣೆಯನ್ನು ಮಾಡಿರುವುದು ವಿಶೇಷವಾಗಿ ಕಂಡುಬಂದಿದೆ. ಇಂತಹ ಸಾಹಸ ಜೀವನವನ್ನು ಮಾಡಿರುವ ಮಹಿಳೆಯರು ಇಂದು ಮ್ಯಾಸಬೇಡ ಸಮುದಾಯದಲ್ಲಿ ಮಾತೃದೇವತೆಗಳಾಗಿ ನೆಲೆಸಿ ವಿಶೇಷವಾಗಿ ಆರಾಧಾನೆಗೊಳ್ಳುತ್ತಿದ್ದಾರೆ. ಈ ಹಿನ್ನಲೆಯಲ್ಲಿ ಪಶುಪಾಲನಾ ಸಮುದಾಯಗಳಲ್ಲಿ ಮಾತೃ ಪ್ರಧಾನ ವ್ಯವಸ್ಥೆ ಇರುವುದು ಇಂದಿಗೂ ಕಂಡುಬರುತ್ತದೆ.

ಒಟ್ಟಾರೆಯಾಗಿ ಮಾನವನ ಜೀವ ವಿಕಾಸದ ಹಂತದಲ್ಲಿ ಆಹಾರ ಸಂಗ್ರಹಕ್ಕಾಗಿ ಕಾಡು ಮೇಡು ಬೆಟ್ಟ ಗುಡ್ಡ, ಹಳ್ಳ ಕೊಳ್ಳಗಳನ್ನು ಅಲೆಯುತ್ತಾ ಒಂದೆಡೆ ನಿಲ್ಲಲು ಆಗದೇ ತನ್ನ ಹೊಟ್ಟೆ ಪಾಡಿಗಾಗಿ ಮೊದಲು ಅಲೆಮಾರಿ ಜೀವನವನ್ನು ನಡೆಸಿರುವುದು ಕಂಡುಬರುತ್ತದೆ. ಆಹಾರ ಸಂಗ್ರಹಣೆಯ ಘಟ್ಟದಲ್ಲಿ ಮಾನವನ ಜೀವನವು ಗಿಡ ಮರ ಹಾಗೂ ಸಸ್ಯ ಪ್ರಪಂಚದ ಮೇಲೆ ಅವಲಂಬಿತವಾಗಿತ್ತು. ಹೀಗಾಗಿ ಪ್ರಕೃತಿಯೇ ಅಲೆಮಾರಿ ಸಮುದಾಯಗಳ ದೈವಗಳಾದವು. ಆ ನಂತರ ಬೇಟೆ, ಪಶುಪಾಲನೆ ಮತ್ತು ಕೃಷಿಯನ್ನು ಅವಲಂಬಿಸಿದ ಮೇಲೆ ಒಂದೆಡೆ ನೆಲೆನಿಂತು ಜೀವನ ನಡೆಸುತ್ತಿದ್ದರು. ಅಂದು ಈ ಪಶುಪಾಲನಾ ಸಮುದಾಯಗಳು ಹೆಚ್ಚಾಗಿ ಕಾಡನ್ನೇ ಅವಲಂಬಿಸಿರುವುದು ಕಂಡುಬಂದಿದೆ. ಕಾಡುಗೊಲ್ಲರು ಮತ್ತು ಮ್ಯಾಸಬೇಡರು ಪರಂಪರೆಯಿಂದಲೂ ಪ್ರಧಾನ ವೃತ್ತಿಯಾಗಿ ಪಶುಪಾಲನೆಯನ್ನು ಮಾಡಿಕೊಂಡು ಬಂದಿರುವುದು ತಿಳಿದುಬಂದಿದೆ. ಇವರು ಪಶುಪಾಲಕರಾಗಿ ತಾವು ವಾಸಿಸುವ ಕಾಡುಗಳಲ್ಲಿಯೇ ಹಟ್ಟಿಗಳನ್ನು ಕಟ್ಟಿಕೊಂಡು ಅಲ್ಲಿಯೇ ಪಶುಪಾಲನೆಯ ರಕ್ಷಣೆಗಾಗಿ ಗೂಡುಗಳನ್ನು ಸಹ ನಿರ್ಮಿಸಿಕೊಂಡಿದ್ದರು. ಕಾಲನಂತರದಲ್ಲಿ ಕಾಡಿನಿಂದ ಕಾಡಂಚಿನ ಪ್ರದೇಶಗಳಲ್ಲಿ ಅಂದರೆ ನಗರ ಜೀವನಕ್ಕೂ ಹೊಂದಿಕೊಳ್ಳದೇ ಇತ್ತ ಕಾಡನ್ನು ಕಳೆದುಕೊಂಡು ಸದಾ ಪ್ರಭುತ್ವದೊಂದಿಗೆ ಹೋರಾಡುತ್ತಾ ಬದುಕುತ್ತಿರುವುದನ್ನು ಕಾಣಬಹುದು. ಆದರೂ ಈ ಸಮುದಾಯಗಳು ತಮ್ಮ ಮೂಲ ಪರಂಪರೆಯಾದ ಮಾತೃಆರಾಧನೆ, ಹಟ್ಟಿ ಸಂಸ್ಕೃತಿ, ಸಾಂಸ್ಕೃತಿಕ ನಾಯಕರ ದೇವರೆತ್ತುಗಳ ಸಂಸ್ಕೃತಿಯನ್ನು ಇಂದಿಗೂ ಜೀವಂತವಾಗಿ ಉಳಿಸಿ ಕೊಂಡು ಬರುತ್ತಿರುವುದನ್ನು ಇಂದಿಗೂ ಕಾಣಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**


- ಅನ್ನಪೂರ್ಣಮ್ಮ. (2008). *ಮ್ಯಾಸ ನಾಯಕರ ಸಾಂಸ್ಕೃತಿಕ ನಾಯಕಿಯರು.* ಸಂಶೋಧನಾ ಕೃತಿ. ಕನ್ನಡ ವಿಶ್ವವಿದ್ಯಾಲಯ.
- ಕೃಷ್ಣಮೂರ್ತಿ ಹನೂರು. (1993). *ಮ್ಯಾಸಬೇಡರ ಸಂಸ್ಕೃತಿ.* ಕರ್ನಾಟಕ ಸಾಹಿತ್ಯ ಅಕಾಡೆಮಿ.
- ಮುತ್ತಯ್ಯ, ಎಸ್.ಎಂ. (2018). *ಚಿತ್ರದುರ್ಗ ಜಿಲ್ಲೆಯ ಪಶುಪಾಲನಾ ಸಂಸ್ಕೃತಿ.* ಕರ್ನಾಟಕ ಜಾನಪದ ವಿಶ್ವವಿದ್ಯಾಲಯ.